ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಲಕ್ಷ್ಮೇಶ್ವರ

ಸಿ.ಸಿ.ನಂ.1376/2025

ಫಿರ್ಯಾದಿದಾರ: ಶ್ರೀ ವಾಸುರಡ್ಡಿ ತಂದೆ ಹನುಮರಡ್ಡಿ ತಿಗರಿ

ವಿರುದ್ಧ

ಆಪಾದಿತ : ಶ್ರೀ ಮಲ್ಲಪ್ಪ ತಂದೆ ನಿಂಗಪ್ಪ ಹೊಸಮನಿ

ಆಪಾದನೆ

ಶ್ರೀ ಸತೀಶ ಎಂ., ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಲಕ್ಷ್ಮೇಶ್ವರ ಆದ ನಾನು

ಶ್ರೀ ಮಲ್ಲಪ್ಪ ತಂದೆ ನಿಂಗಪ್ಪ ಹೊಸಮನಿ, ವಯಾ: 48 ವರ್ಷ,

ಸಾ: ಬನ್ನಿಕೊಪ್ಪ, ತಾ: ಶಿರಹಟ್ಟಿ ಜಿ: ಗದಗ.

ಆದ ನಿಮ್ಮ ಮೇಲೆ ಸಲ್ಲಿಸಿದ ಆಪಾದನೆ ಏನೆಂದರೆ -

ಫಿರ್ಯಾದಿದಾರ ಮತ್ತು ಆಪಾದಿತನಾದ ನೀನು ಪರಿಚಯಸ್ಥರಿದ್ದು, ಆಪಾದಿತನಾದ ನೀನು ಮನೆತನದ ಅಡಚಣೆ ಹಾಗೂ ಇತರೆ ಕೊಡುಕೊಳ್ಳಿ ತೀರಿಸುವ ಸಲುವಾಗಿ ಫಿರ್ಯಾದಿದಾರನಿಂದ ರೂ.1,50,000/- ಗಳನ್ನು ಕೈಗಡ ಸಾಲವಾಗಿ ದಿ: 16.01.2025 ರಂದು ಸಾಕ್ಷಿದಾರರ ಸಮಕ್ಷಮ ಮೂರು ತಿಂಗಳ ಒಳಗಾಗಿ ಪರತ ನೀಡುತ್ತೇನೆಂದು ಪಡೆದುಕೊಂಡಿದ್ದು, ಮೂರು ತಿಂಗಳ ನಂತರ ಫಿರ್ಯಾದಿದಾರರು ಸಾಲ ಮರುಪಾವತಿ ಮಾಡುವಂತೆ ಕೇಳಿದಾಗ ಇಂದು ಕೊಡುತ್ತೇನೆ, ನಾಳೆ ಕೊಡುತ್ತೇನೆ ಅಂತಾ ದಿನಮೇಕ ಹಾಕುತ್ತಾ ಬಂದು ಕೊನೆಗೆ ದಿ: 01.07.2025 ರಂದು ಆರೋಪಿತನಾದ ನೀನು ನಿನ್ನ ಖಾತೆ ಹೊಂದಿರುವ ಕೆನರಾ ಬ್ಯಾಂಕ್, ಬನ್ನಿಕೊಪ್ಪ ಶಾಖೆಗೆ ಸೇರಿದ ಚೆಕ್ ನಂ.491497 ರಲ್ಲಿ ರೂ.1,50,000/- ಎಂದು ನಮೂದು ಮಾಡಿ ಬ್ಯಾಂಕಿಗೆ ಹಾಜರುಪಡಿಸಿ ನಗದೀಕರಿಸಿಕೊಳ್ಳುವಂತೆ ನೀಡಿದ್ದೀರಿ, ಸದರಿ ಚೆಕನ್ನು ಫಿರ್ಯಾದಿದಾರರು ನಗದೀಕರಣಕ್ಕಾಗಿ ತಾವು ಖಾತೆ ಹೊಂದಿರುವ ಎಸ್.ಬಿ.ಐ. ಬ್ಯಾಂಕ್, ಶಿರಹಟ್ಟಿ ಶಾಖೆಗೆ ದಿ: 01.07.2025 ರಂದೇ ಹಾಜರುಪಡಿಸಿದ್ದು, ಸದರಿ ಬ್ಯಾಂಕಿನವರು ಖಾತೆಯಲ್ಲಿ ಚೆಕ್ ಮಾನ್ಯವಾಗುವಷ್ಟು ಹಣ ಇರುವುದಿಲ್ಲ "Funds Insufficient" ಎಂದು ಮೇಮೊದೊಂದಿಗೆ ಚೆಕಗಳನ್ನು ದಿ: 03.07.2025 ರಂದು ವಾಪಸ್ಸು ನೀಡಿರುತ್ತಾರೆ. ನಂತರ ಫಿರ್ಯಾದಿದಾರರು ತಮ್ಮ ವಕೀಲರ ಮುಖಾಂತರ ದಿನಾಂಕ 22-07-2025 ರಂದು ಆಪಾದಿತನಾದ ನಿಮ್ಮ ವಿಳಾಸಕ್ಕೆ ನೋಂದಾಯಿತ ಅಂಚೆಯ ಮೂಲಕ

ನೋಟಿಸನ್ನು ಕಳುಹಿಸಿದ್ದು, ಸದರಿ ನೋಟಿಸ್ ದಿ: 23-08-2025 ರಂದು ಜಾರಿಯಾಗಿದ್ದು ಇರುತ್ತದೆ, ಸದರಿ ನೋಟಿಸಿಗೆ ಯಾವುದೇ ಉತ್ತರವನ್ನೂ ನೀಡದೇ ಹಾಗೂ ಫಿರ್ಯಾದಿಗೆ ಚೆಕ್ಕಿನ ಹಣವನ್ನು ಮರುಪಾವತಿ ಮಾಡದೇ ಇದ್ದು, ಆ ಮೂಲಕ ವರ್ಗಾವಣೆಯ ಲಿಖಿತ ಕಾಯ್ದೆ ಕಲಂ.138 ರ ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಪ್ರಶ್ನೆ-1. ನಿಮ್ಮ ಮೇಲೆ ಹೊರಿಸಲಾಗಿರುವ ಆಪಾದನೆಯನ್ನು ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ: ಕೇಳಿರುತ್ತೇನೆ

ಪ್ರಶ್ನೆ-2: ನೀವು ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೆಂದು ಕೇಳಿಕೊಳ್ಳುವಿರಾ?

ಉತ್ತರ: ವಿಚಾರಣೆಯಾಗಬೇಕು

(ಈ ಮೇಲಿನ ಆಪಾದನೆಯನ್ನು ತೆರದ ನ್ಯಾಯಾಲಯದಲ್ಲಿ ಈ ದಿನ ದಿ: **15.04.2026** ರಂದು ಆರೋಪಿತನಿಗೆ ಓದಿ ಹೇಳಲಾಗಿ ಅವನು ಕೊಟ್ಟ ಉತ್ತರವನ್ನು ಕೊಟ್ಟಂತೆ ಬರೆದುಕೊಳ್ಳಲಾಯಿತು)

ದಿವಾಣಿ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ ದಂ. ಗಳು ಲಕ್ಷ್ಮೇಶ್ವರ